

# ವಾಚಾಳಿ ಪುಟಾಣಿ ಮೌನಿಯಾದಾಗ!

ಸಲ್ಮಾನ್ ಖಾನ್ ಅಭಿನಯದ ಕಬೀರ್ ಖಾನ್ ನಿರ್ದೇಶನದ 'ಬಜರಂಗಿ ಭಾಯಿಜಾನ್' ಬಿಡುಗಡೆಯಾದ ಮೂರು ದಿನದಲ್ಲಿಯೇ 100 ಕೋಟಿ ಕ್ಲಬ್ ಸೇರಿದೆ. ಸಲ್ಮಾನ್ ಅಭಿನಯದ ಬೆರಳಣಿಕೆಯ ಸಂವೇದನಾತ್ಮಕ ಸಿನಿಮಾಗಳಲ್ಲಿ 'ಬಜರಂಗಿ...'ಯೂ ಒಂದು. ಸಲ್ಮಾನ್, ಕರೀನಾ ಕಪೂರ್‌ನಂತಹ ಖ್ಯಾತನಾಮರಿದ್ದರೂ ಇಡೀ ಚಿತ್ರವನ್ನು ಆವರಿಸಿದ್ದು ಮುಗ್ಧ ಭಾವಗಳಿಂದ ಕಾಡಿದ ಆರು ವರ್ಷದ ಪುಟಾಣಿ ಹುಡುಗಿ ಹರ್ಷಾಲಿ ಮಲ್ಹೋತ್ರಾ.

ಇಡೀ ಚಿತ್ರದಲ್ಲಿ ಮೂಕಿಯಾಗಿ ಕಾಣಿಸಿಕೊಳ್ಳುವ ಹರ್ಷಾಲಿ, ತೊದಲು ನುಡಿಗಳನ್ನು ಉಲಿಯುವುದು ಕೊನೆಯ ದೃಶ್ಯದಲ್ಲಿ ಮಾತ್ರ. ನಿಜವಾಗಿಯೂ ಆಕೆ ಮೂಕಿಯೇ ಎನ್ನುವಂತಹ ನೈಜ ಅಭಿನಯ ನೀಡಿದವಳು ಹರ್ಷಾಲಿ. ಆದರೆ ವಾಸ್ತವವಾಗಿ ಆಕೆ ಬಲು ವಾಚಾಳಿ. ಮಾತನಾಡಲು ಪ್ರಾರಂಭಿಸಿದರೆ ಆಕೆಯನ್ನು ತಡೆಯುವುದೇ ಕಷ್ಟ. ಸಿನಿಮಾದ ಕಾರ್ಯಾಗಾರದಲ್ಲಿಯೂ ಹರ್ಷಾಲಿಯನ್ನು ನಿಯಂತ್ರಿಸುವುದು ಬಹಳ ಕಷ್ಟವಾಗಿತ್ತಂತೆ. ಒಂದು ಕ್ಷಣ ಹರ್ಷಾಲಿ ಸುಮ್ಮನೆ ಕುಳಿತವಳಲ್ಲ. ಇನ್ನು ಚಿತ್ರೀಕರಣದಲ್ಲಿಯೂ ಇದೇ ರೀತಿ ಕಾಟ ನೀಡಿದರೆ ಏನು ಮಾಡುವುದು ಎಂಬುದು ಚಿತ್ರತಂಡದ ಚಿಂತೆಯಾಗಿತ್ತಂತೆ.

'ಮೌನಿಯಾಗಿ ಸಿನಿಮಾ ರಸಿಕರ ಹೃದಯ ಸ್ಪರ್ಶಿ ಅಭಿನಯ ನೀಡಿದವಳು, ನಿಜ ಜೀವನದಲ್ಲಿ ಅತಿ ವಾಚಾಳಿ. ಮೂಕಿಯ ಪಾತ್ರವಾಗಿದ್ದರೂ ಸಿನಿಮಾದಲ್ಲಿ ಹರ್ಷಾಲಿ ತುಂಟತನಗಳಿಗೇನೂ ಕಡಿಮೆ ಇಲ್ಲ. ಆಕೆ ಇರುವುದೂ ಹಾಗೆಯೇ' ಎಂದು ಆಕೆಯ ತಾಯಿ ಹೇಳಿದ್ದಾರೆ. ಚಿತ್ರದುದ್ದಕ್ಕೂ ಸಲ್ಮಾನ್ ಜೊತೆಯೇ ಇರುವ ಪಾತ್ರ ಹರ್ಷಾಲಿಯದ್ದು. ಹರ್ಷಾಲಿ ಪ್ರತಿಭಾವಂತೆಯಾಗಿದ್ದರೂ ಚಿತ್ರೀಕರಣದ ಎಲ್ಲಾ ತಾಣಗಳಿಗೂ ಆಕೆಯನ್ನು ಕರೆದುಕೊಂಡು ಹೋಗುವುದು, ಖುಷಿಯಾಗಿರಿಸಿಕೊಳ್ಳುವುದು ಚಿತ್ರತಂಡಕ್ಕೆ ದೊಡ್ಡ ಸವಾಲಾಗಿತ್ತು. ಹರ್ಷಾಲಿ ಸಹ ಸಾಕಷ್ಟು ಕಷ್ಟಗಳನ್ನು ಎದುರಿಸಿದ್ದಳಂತೆ. ಸಿನಿಮಾದಲ್ಲಿ ಆ್ಯಕ್ಷನ್ ಅಥವಾ ಭಾರಿ ಸದ್ದು ಇರುವ ಸನ್ನಿವೇಶ ಇದ್ದಾಗ ತುಂಟಿ ಹರ್ಷಾಲಿ ಹೆದರುತ್ತಿದ್ದಳು. ಹೀಗಾಗಿ ಆಕೆಯನ್ನು ಒಂದಷ್ಟು ಜನರ ಮಧ್ಯೆ ಹರಟೆ ಹೊಡೆಯಲು ಅಥವಾ ಆಟವಾಡಲು ಬಿಡಲಾಗುತ್ತಿತ್ತು. ಹಾಗೆ ಮನಸಿಗೆ ಸ್ವಲ್ಪ ಖುಷಿ ಸಿಕ್ಕ ಬಳಿಕವಷ್ಟೇ ಹರ್ಷಾಲಿ ಮತ್ತೆ ಚಿತ್ರೀಕರಣಕ್ಕೆ ಸಿದ್ಧವಾಗುತ್ತಿದ್ದದ್ದು.

ಹರ್ಷಾಲಿಯನ್ನು ಫರ್ಹಾ ಖಾನ್ 'ಶತಮಾನದ ಅನ್ವೇಷಣೆ' ಎಂದು ಕರೆದಿದ್ದಾರೆ. ಧಾರಾವಾಹಿ ಮತ್ತು ಅನೇಕ ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದ ಹರ್ಷಾಲಿಯನ್ನು ಕಂಡ ಕಬೀರ್ ಖಾನ್, ಈಕೆಯೇ ತನ್ನ ಚಿತ್ರದಲ್ಲಿ ನಟಿಸಬೇಕು ಎಂದು ಪಟ್ಟು ಹಿಡಿದು ಆಕೆಯನ್ನು ಚಿತ್ರಕ್ಕೆ ಆಯ್ದುಕೊಂಡಿದ್ದು.

ಮುಗ್ಧ ಮುಖದ ನಗುವಿನಲೇ ಅಳಿಸಿದ ಹರ್ಷಾಲಿ ಈಗ ಮನೆ ಮಾತು. ಮಾತನಾಡದೆಯೇ ಇಷ್ಟು ಮಾತನಾಡಿದ ಹುಡುಗಿಗೆ ಇನ್ನು ಮಾತನಾಡಲು ಅವಕಾಶ ಸಿಕ್ಕರೆ...?



# ಕರೀನಾ ಬದಲಾಗದ ಬದುಕು!

ಮದುವೆಯಾಗಿ ಮೂರು ವರ್ಷ ಕಳೆದರೂ ಕರೀನಾ ಕಪೂರ್– ಸೈಫ್ ಅಲಿ ಖಾನ್ ತಮ್ಮ ಕುಟುಂಬಕ್ಕೆ ಹೊಸ ಸದಸ್ಯ/ಸ್ಯೆಯನ್ನು ಕರೆತರುವ ಬಗ್ಗೆ ಇನ್ನೂ ಯೋಚನೆ ಮಾಡಿಲ್ಲವೇ ಎಂಬ ಕುತೂಹಲ ಬಿಟೌನ್‌ನಲ್ಲಿ ಮೂಡಿದೆ. ನವಾಬ್ ದಂಪತಿ ಅದರ ಕುರಿತು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಕರೀನಾ ತಾಯ್ತನದ ಕನಸುಗಳನ್ನೇನೋ ದೊಡ್ಡದಾಗಿ ಕಟ್ಟಿಕೊಳ್ಳುತ್ತಿದ್ದಾಳಂತೆ. ಆದರೆ 'ಸದ್ಯಕ್ಕಂತೂ ಮಗು ಹೊಂದುವ ಆಲೋಚನೆ ಇಲ್ಲ. ಅದರ ಬಗ್ಗೆ ನಾನು ಸ್ಪಷ್ಟ ನಿಲುವು ತಾಳಿದ್ದೇನೆ' ಎಂದಿದ್ದಾಳೆ ಕರೀನಾ. ಇನ್ನು ಎರಡು ಮೂರು ವರ್ಷವಂತೂ ಮಕ್ಕಳು ಮರಿ ಎಂದು ಯೋಚಿಸುವುದೂ ಇಲ್ಲ ಎಂದಿದ್ದಾಳೆ ಆಕೆ.

ಮದುವೆಯ ಬಳಿಕವೂ ಕರೀನಾ ಸಿನಿಮಾಗಳಲ್ಲಿ ಅಷ್ಟೇ ಸಕ್ರಿಯವಾಗಿ ತೊಡಗಿಕೊಂಡಿದ್ದಾಳೆ. ಈಗಲೂ ಮೊದಲಿನಂತೆಯೇ ಮನರಂಜನೆ ಮತ್ತು ವ್ಯಾಪಾರಿ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೇನೆ ಎನ್ನುತ್ತಾಳೆ. ಸಂಸಾರ ಬಂಧನಕ್ಕೆ ಸಿಲುಕಿದ ಮೇಲೆ ಸಿನಿಮಾಗಳಲ್ಲಿ ನಟಿಸುವುದು, ಕುಟುಂಬ ನಿರ್ವಹಣೆ ಎರಡನ್ನೂ ನಿಭಾಯಿಸುವುದು ಅಷ್ಟು ಸುಲಭವಲ್ಲ. ನಟಿಯಾಗಿ ಎಲ್ಲವನ್ನೂ ನಿರ್ವಹಿಸಲೇಬೇಕು ಎನ್ನುವುದು ಬೆಬೊ ಅಭಿಪ್ರಾಯ.

ಕರೀನಾ ಸಿನಿಮಾರಂಗಕ್ಕೆ ಕಾಲಿರಿಸಿ ಆಗಲೇ 15–16 ವರ್ಷಗಳಾಗಿವೆ. ಈ ಪಯಣದ ಬಗ್ಗೆ ಸಾಕಷ್ಟು ಹೆಮ್ಮೆ ಇದೆ ಎನ್ನುತ್ತಾಳೆ ಆಕೆ. 'ಬೇವಾಫ್'ನಲ್ಲಿನ ಅನಿಲ್ ಕಪೂರ್ ಹೆಂಡತಿಯ ಪಾತ್ರದಿಂದ ಈಗ ಅರ್ಜುನ್ ಕಪೂರ್ ಪ್ರೇಮಿಯ ಪಾತ್ರದವರೆಗೆ ನಟಿಸಿದ್ದೇನೆ. ಈಗಲೂ ಎಲ್ಲಾ ಖಾನ್‌ರೊಂದಿಗೂ ತೆರೆ ಹಂಚಿಕೊಳ್ಳುತ್ತಿದ್ದೇನೆ' ಎನ್ನುವ ಬೆಬೊ, ಕಮರ್ಷಿಯಲ್ ಮತ್ತು ಆಫ್ ಬೀಟ್ ಸಿನಿಮಾಗಳಲ್ಲಿ ಇಷ್ಟು ಸಮತೋಲನ ಕಾಯ್ದುಕೊಂಡಿರುವ ನಟಿ ತಾನೊಬ್ಬಳೇ ಎಂಬ ಅನಿಸಿಕೆ ವ್ಯಕ್ತಪಡಿಸಿದ್ದಾಳೆ. ಪ್ರಯೋಗಾತ್ಮಕ ಸಿನಿಮಾಗಳಲ್ಲಿ ನಟಿಸುವುದನ್ನು ಮುಂದುವರಿಸುವ ಗುರಿಯೂ ಕರೀನಾಳಲ್ಲಿದೆ.

'ನನ್ನಲ್ಲಿ ಯಾವತ್ತೂ ಅಭದ್ರತಾ ಭಾವ ಮೂಡಿಯೇ ಇಲ್ಲ. ಇಷ್ಟು ವರ್ಷವಾದರೂ ಕೆಲಸ ಮಾಡುತ್ತಿರುವುದು ಖುಷಿ ನೀಡುತ್ತಿದೆ. ಸಂತಸದಿದ್ದೇನೆ, ಸ್ವತಂತ್ರವಾಗಿದ್ದೇನೆ ಮತ್ತು ಮದುವೆಯನ್ನೂ ಆಗಿದ್ದೇನೆ! ಮದುವೆಯ ಬಳಿಕವೂ ವೃತ್ತಿಬದುಕನ್ನು ಸುಂದರವಾಗಿ ಸಾಗಿಸಬಹುದು ಎಂಬುದರ ಬಗ್ಗೆ ಈಗಿನ ಯುವತಿಯರಿಗೆ ನಾನು ಉದಾಹರಣೆಯಾಗಬೇಕು' ಎಂದಿದ್ದಾಳೆ ಕರೀನಾ.

■ ಅಮಿ